[Govt. of Karnataka C.R.P. 67]

| Deposition Sheets (RP.No.57) Form No.4 (Civil) | IN THE COURT OF CIVIL JUDGE & J.M.F.C., KARKALA. |
|---|---|

Criminal Case No. 435/2021

..................................................Vs....................................

ಸಾಕ್ಷಿದಾರನ ಹೆಸರು ಃ ಶಂಕರ ಶೆಟ್ಟಿ ಪಿ.ಡಬ್ಲ್ಯೂಃ 1

ತಂದೆಯ ಹೆಸರುಃ ದಿ. ಸಾಧು ಶೆಟ್ಟಿ

ಪ್ರಾಯ ಃ 63 ವರ್ಷ

ಉದ್ಯೋಗ ಃ ವ್ಯಾಪಾರ

ವಾಸ ಃ ಮುನಿಯಾಲು

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು. ದಿಃ 07-03-2026

ದಂ ಪ್ರ ಸಂ ಕಲಂ 299 ರಡಿಯಲ್ಲಿ ಸಾಕ್ಷಿಯ ಹೇಳಿಕೆ

ಆರೋಪಿ ನನಗೆ ಸುಮಾರು 10-12 ವರ್ಷಗಳಿಂದ ಪರಿಚಯ. ಅವರು ಮಿತ್ತಬೈಲು ಮೂಡಬಿದ್ರೆ ನಿವಾಸಿ. ದಿಃ 18-03-2018 ರಂದು ನಾನು ಅವರಿಗೆ ರೂ. 4,00,000/- ಹಣವನ್ನು ಅವರ ಜರೂರು ಖರ್ಚಿಗಾಗಿ ನೀಡಿದ್ದೆ. ಆರೋಪಿಯು ಅದನ್ನು 2 ವರ್ಷಗಳಲ್ಲಿ ಮರುಪಾವತಿಸುವುದಾಗಿ ಹೇಳಿದ್ದರು. 2 ವರ್ಷಗಳ ನಂತರ ಸದರಿ ಹಣ ವಾಪಾಸ್ಸು ಮಾಡುವಂತೆ ಆರೋಪಿಯನ್ನು ಕೇಳಿದಾಗ ತನ್ನ ಬಳಿ ಹಣ ಇಲ್ಲ ಎಂದು ಹೇಳಿ ಸದರಿ ಮೊತ್ತಕ್ಕೆ ತನ್ನ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್ ಖಾತೆಯ ಚೆಕ್ ನೀಡಿರುತ್ತಾರೆ. ಸದರಿ ಚೆಕ್ ನಂಃ 002282 ಆಗಿರುತ್ತದೆ. ಅದರ ದಿನಾಂಕ 10-02-2021. ನಂತರ ಅದನ್ನು ನಗದೀಕರಣಕ್ಕಾಗಿ ಕಾರ್ಕಳದ ಐ.ಓ.ಬಿ ಬ್ಯಾಂಕಿಗೆ ನನ್ನ ಖಾತೆಯ ಮೂಲಕ ಹಾಜರುಪಡಿಸಿದ್ದೆ. ಆದರೆ ಅದು ದಿಃ 02-03-2021 ರಂದು Drawers Signature differs ಎಂಬುದಾಗಿ ವಾಪಾಸ್ಸು ಬಂದಿರುತ್ತದೆ. ನಂತರ ವಕೀಲರ ಮೂಲಕ ದಿಃ 08-03-2021 ರಂದು ಆರೋಪಿಗೆ ಸದರಿ ಹಣ ಪಾವತಿಸುವಂತೆ ನೋಟಿಸು ನೀಡಿರುತ್ತೇನೆ. ಸದರಿ ನೋಟಿಸು ದಿಃ 13-03-2021 ರಂದು ಆರೋಪಿಗೆ ತಲುಪಿರುವ ಬಗ್ಗೆ ಅಂಚೆ ಸ್ವೀಕೃತಿ ಬಂದಿರುತ್ತದೆ. ಆರೋಪಿ ನೋಟೀಸಿಗೆ ಉತ್ತರ

ನೀಡಿರುವುದಿಲ್ಲ ಹಾಗೂ ಸದರಿ ಹಣ ಮರುಪಾವತಿ ಮಾಡಿರುವುದಿಲ್ಲ. ನಂತರ ಈ ದೂರು ದಾಖಲಿಸಿರುತ್ತೇನೆ.

ಆರೋಪಿಯು ನೀಡಿದ ಮೂಲ ಚೆಕ್ಕನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-1 ಎಂದು, ಅದರ ಮೇಲೆ ಇರುವ ಆರೋಪಿಯ ಸಹಿಯನ್ನು ನಿಪಿ-1(ಎ) ಎಂದು, ಬ್ಯಾಂಕಿನವರು ನೀಡಿದ ಹಿಂಬರಹ ಹಾಜರುಪಡಿಸಿದ್ದು, ಅದನ್ನು ನಿಪಿ-2 ಎಂದು, ವಕೀಲರ ನೋಟಿಸಿನ ಕಚೇರಿ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-3 ಎಂದು, ಅಂಚೆ ರಶೀದಿ ಹಾಜರುಪಡಿಸಿದ್ದು, ಅದನ್ನು ನಿಪಿ-4 ಎಂದು, ಅಂಚೆ ಸ್ವೀಕೃತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-5 ಎಂದು ಗುರುತಿಸಲಾಯಿತು.

ಆರೋಪಿಯು ತಲೆ ಮರೆಸಿಕೊಂಡಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ